- -

ಅಸಲು ದಾವೆ ಸಂಖ್ಯೆ -299/2022
ಪಿ.ಡಬ್ಲ್ಯೂ - 01
ದಿನಾಂಕಃ 26.11.2025.
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ನೇಪ್ರತಿವಾದಿ ಪರ ಶ್ರೀ.C.S.M   ವಕೀಲರಿಂದ**

ಫಕ್ಕೀರಪ್ಪರವರಿಗೆ 1 ನೇ ಪ್ರತಿವಾದಿ ಹೆಂಡತಿ ಆಗಿದ್ದು ಅವರಿಗೆ ಮಹಾಂತೇಶ ಎಂಬ ಮಗ ಇರುತ್ತಾನೆ, ನೀವು ಫಕ್ಕೀರಪ್ಪ ಹೆಂಡತಿ ಇರುವುದಿಲ್ಲ ಎಂದರೆ ಸರಿ ಅಲ್ಲ. ಮುಂದುವರೆದು ನಾನು 12 ವರ್ಷದವಳಾಗಿದ್ದಾಗ ಫಕ್ಕಿರಪ್ಪರವರ ಜೊತೆ ಮದುವೆ ಮಾಡಿರುತ್ತಾರೆ. ಅಕ್ಕ-ತಂಗಿಯರನ್ನು  ಅಣ್ಣ- ತಮ್ಮರವರಿಗೆ ಕೊಟ್ಟಿರುತ್ತಾರೆ. ದಾವಾ ಆಸ್ತಿಗೆ 1 ನೇ ಪ್ರತಿವಾದಿಯೇ ಮಾಲೀಕರಾಗಿದ್ದು ಹಣ ಅವಶ್ಯಕತೆ ಇದ್ದಿದ್ದರಿಂದ ಅದನ್ನು ಮಾರಾಟ ಮಾಡಿರುವ ವಿಷಯ ನಿಮಗೆ ಗೊತ್ತಿರುತ್ತದೆ ಎಂಧರೆ ಗೊತ್ತು ಮುಂದುವರೆದು ನನಗೆ ಗೊತ್ತಾ ತಕ್ಷಣ ನಾನು ಪಂಚಾಯಿತಿಗೆ ತಕರಾರನ್ನು ಸಲ್ಲಿಸಿರುತ್ತೇನೆ.  ಮಾರಾಟವಾದ ಬಳಿಕ ದಾವಾ ಆಸ್ತಿಯಲ್ಲಿ 2 ನೇ ಪ್ರತಿವಾದಿಯು ಕಬ್ಜೆಯಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿದಾಗಿನಿಂದ, 2 ನೇ ಪ್ರತಿವಾದಿಯೇ ಕಬ್ಜಾದಲ್ಲಿ ಇದ್ದಾರೆ ಎಂದರೆ ಸರಿ ಅಲ್ಲ.

ದಾವಾ ಆಸ್ತಿಗೆ ಸಂಬಂಧ ಪಟ್ಟಂತೆ ನೀವು ಯಾವುದೇ ಕಂದಾಯ ಪಾವತಿ ಮಾಡಿರುವುದಿಲ್ಲ ಎಂದರೆ ನಮ್ಮ ಹಿರಿಯರು ತುಂಬಿರುತ್ತಾರೆ ನಾನು ತುಂಬಿರುವುದಿಲ್ಲ. ದಾವಾ ಆಸ್ತಿಯನ್ನು ಮಾರಾಟ ಮೊದಲು  1 ನೇ ಪ್ರತಿವಾದಿ ಕಂದಾಯ ತುಂಬಿರುತ್ತಾರೆ, ಮಾರಾಟವಾದ ಬಳಿಕ 2 ನೇ ಪ್ರತಿವಾದಿ ಕಂದಾಯ ತುಂಬುತ್ತೀದ್ದಾರೆ ಎಂದರೆ ಸರಿ ಅಲ್ಲ. ನಿಮ್ಮ ಹಿರಿಯರು ಅಥವಾ ನೀವು ಪಾವತಿ ಕಂದಾಯ ರಶೀದಿ ನ್ಯಾಯಾಲಯಕ್ಕೆ ಹಾಜರು ಪಡೆಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಫಕ್ಕೀರಪ್ಪನವರಿಗೆ ನೀವು ಹೆಂಡತಿ ಇರುವುದಿಲ್ಲ ಆದಕಾರಣ ದಾವಾ ಆಸ್ತಿಯಲ್ಲಿ ನಿಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ ಅಲ್ಲ. ದಾವಾ ಆಸ್ತಿಯಲ್ಲಿ ನಿಮಗೆ ಹಕ್ಕು ಇಲ್ಲದೇ ಇದ್ದರು ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ದಾವೆಯನ್ನು ಹುಡಿದ್ದೀರಿ ಎಂದರೆ ಸರಿ ಅಲ್ಲ.

**ಪಾಟೀ ಸವಾಲು: 2 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.